## ಹರಿದ ಬಟ್ಟೆ ಯಾಕ್ ತಗೊಂಡೆ?



ಕಳೆದ ತಿಂಗಳು ಕುಂದಾಪುರಕ್ಕೆ ಸಂಬಂಧಿಕರ ಮದುವೆಗೆ ಹೋಗಿದ್ದೆವು. ಮುಂದಿನ ಸಾಲಿನಲ್ಲಿ ಕುಳಿತ ಹಿರಿಯರೊಬ್ಬರನ್ನು ಮಾತನಾಡಿಸಲು ಹೋಗಿ ಅವರ ಪಕ್ಕದಲ್ಲೇ ಕುಳಿತೆವು. ಅಲ್ಲಿಗೆ ಅವರ ಮೊಮ್ಮಗಳಂತೆ ಕಾಣುವ ಹೈದರಾಬಾದಿನಲ್ಲಿ ಓದುತ್ತಿದ್ದ ಹುಡುಗಿ ಬಂದು, 'ಅಜ್ಜ, ಹೇಗಿದ್ದೀರಾ?' ಎಂದು ಕೇಳುತ್ತ ಎದುರು ನಿಂತಳು. ಮೊಮ್ಮಗಳನ್ನೊಮ್ಮೆ ಮೇಲಿನಿಂದ ಕೆಳಗಿನವರೆಗೂ ನೋಡಿ, 'ನಾನು ಚೆನ್ನಾಗಿದ್ದೀನಿ ಮಗಾ, ನೀ ಹೇಗಿದ್ದೀಯ' ಎಂದು ಕುಶಲೋಪರಿ ವಿಚಾರಿಸಿ, 'ಈ ಅಂಗಿ ಯಾಕೆ ಹಾಕ್ಕೊಂಡು ಬಂದೆ?' ಎಂದರು. 'ಇದು ಹೊಸ ಡ್ರೆಸ್ ಅಜ್ಜ, ಈ ಮದುವೆಗಂತಾನೇ ತೆಗೆದುಕೊಂಡಿದ್ದು, ಸೂಪರ್ ಅಲ್ವಾ?' ಎಂದಳು ಹುಡುಗಿ. 'ಅಲ್ಲ ಮಗಾ, ಅಷ್ಟೆಲ್ಲಾ ದುಡ್ಡು ಕೊಟ್ಟು ತಗೊಳ್ಳೊ ಬಟ್ಟೆ... ಸ್ವಲ್ಪ ನೋಡಿ ತಗೊಳ್ಳೋದಲ್ವಾ? ಎಲ್ಲಾ ಹರಿದು ಹೋಗಿದ್ದನ್ನ ತಗೊಂಡಿದ್ದೀಯ? ನೀನೇನೊ ಚಿಕ್ಕವಳು, ನಿಮ್ಮಮ್ಮನಿಗಾದ್ರೂ ತಿಳಿಬಾರದಾ?' ಅಜ್ಜ ಇನ್ನೂ ಹೇಳುತ್ತಿರುವಾಗಲೇ ಮೊಮ್ಮಗಳು ಅಲ್ಲಿಂದ ಪರಾರಿಯಾಗಿದ್ದಳು.

**ಮಂಜುಳಾ ಎಸ್. ಶಾಸ್ತ್ರಿ**

## ಬಾಬಾರ ನಿದ್ರೆಗೆ ತೊಂದರೆ



ನಮ್ಮ ಮನೆಗೆ ಸಮೀಪದ ಸಾಯಿಬಾಬಾ ಮಂದಿರದಲ್ಲಿ ಪ್ರತಿ ಗುರುವಾರ ವಿಶೇಷ ಪೂಜೆ ಇರುತ್ತದೆ. ಭಜನೆ, ಆರತಿ, ನೈವೇದ್ಯ ಮುಗಿಸಿ ಜೋಗುಳದ ಹಾಡಿನ ಮೂಲಕ ಬಾಬಾರನ್ನು ಶಯನಕ್ಕೆ ಕಳಿಸಲಾಗುತ್ತದೆ. ನಂತರ ಭಕ್ತರು ಪ್ರಸಾದ ಹಂಚಿಕೊಂಡು ತಿಂದು ಮನೆಗೆ ತೆರಳುತ್ತಾರೆ. ಅಂದು ಪ್ರಸಾದ ಸ್ವೀಕರಿಸುವ ಸಮಯದಲ್ಲಿ ವಿಪರೀತ ಗದ್ದಲ ಆರಂಭವಾಯ್ತು. ಭಕ್ತರ ಕಿರಿಕಿರಿಗೆ ಬೇಸತ್ತ ಸಂಘಟಕರೊಬ್ಬರು ಈ ಗಲಾಟೆ ನಿಲ್ಲಿಸಲು ಉಪಾಯವಾಗಿ ಧ್ವನಿವರ್ಧಕದಲ್ಲಿ, 'ಈಗ ತಾನೆ ಜೋಗುಳ ಹಾಡಿ ಬಾಬಾರನ್ನು ಮಲಗಿಸಿದ್ದೀರಿ. ನಿಮ್ಮ ಈ ಗದ್ದಲದಿಂದ ಅವರ ನಿದ್ರೆಗೆ ತೊಂದರೆ ಆಗುವುದಿಲ್ಲವೆ?' ಎಂದು ಹೇಳುತ್ತಿದ್ದಂತೆ ಮಂದಿರ ನಿಶ್ಶಬ್ದವಾಯಿತು.

**ಸುರೇಶ ಹೆಗಡೆ**